ಹೇಳುವಾಗ, ಆ ತರಹ ಹತ್ತಿಕ್ಕುತ್ತಾರೆ ಎಂದು ನಮ್ಮ ಭಾವನೆಯಲ್ಲ. ಅವರು ಯಾವ ಭಾವನೆಯಲ್ಲಿ ಹೇಳುತ್ತಾರೋ ಗೊತ್ತಿಲ್ಲ. ವಿರೋಧಪಕ್ಷಗಳನ್ನು ತುಳಿಯತಕ್ಕ ಸನ್ನಾಹ ಇಡೀ ಸರ್ಕಾರಕ್ಕೆ ಇದೆ. ಅದರಲ್ಲೇನೂ ಅನುಮಾನ ಇಲ್ಲ.

ಅಧ್ಯಕ್ಷರು : ಯಾವ ವಿಚಾರ ಬೇಕಾದರೂ, ಎಲ್ಲರೂ ಚರ್ಚೆಮಾಡಿ. ಸಮಯ ಹೋಗುತ್ತದೆ, ಬೇರೆ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಸಿಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಂಸದೀಯ ಸಚಿವರು ಭಾಷಣ ಮಾಡುವಾಗ, ಎರಡು ಭಾಗ ಮಾಡಿದರು. ಒಂದು ಕಾನೂನು, ಮತ್ತೊಂದು ಅಧಿಕಾರಿಯನ್ನು ಯಾವ ಘಳಿಗೆಯಲ್ಲಿ ಎಲ್ಲಿಗೆ ಬೇಕಾದರೂ ಬದಲಾವಣೆ ಮಾಡತಕ್ಕಂಥ ವ್ಯವಸ್ಥೆ ಇದೆ ಎನ್ನತಕ್ಕಂಥ ಮಾತನ್ನು ಹೇಳಿದರು. ಈ ವ್ಯವಸ್ಥೆ ಏನಿದೆ ಎನ್ನತಕ್ಕ ಮಾತಿನ ಅರ್ಥ, ನನಗೆ ಅರ್ಥವಾಯಿತು. ಆದ್ದರಿಂದ ತಾವು, ಆ ಕ್ರಿಯೆಯನ್ನು ಬಹಳ ಬೇಗ ತಾವು ಮಾಡಿದರೆ, ಅಲ್ಲಿ ಪರಿಸ್ಥಿತಿ ಅನುಕೂಲವಾಗುತ್ತದೆ. ಮತ್ತು ಅಲ್ಲಿ ಶಾಂತ ವಾತಾವರಣ ನಿರ್ಮಾಣವಾಗುವುದಕ್ಕೆ ಸೌಹಾರ್ದರೀತಿಯಿಂದ ಎಲ್ಲಾ ಕೋಮಿನ ಜನ, ಶಾಂತಿಯಿಂದ ಬದುಕುವುದಕ್ಕೆ, ಸರ್ಕಾರ ಪರಿಣಾಮಕಾರಿಯಾಗಿ, ವ್ಯವಸ್ಥಿತವಾಗಿ, ಕೆಲಸವನ್ನು ಮಾಡಬೇಕೆನ್ನುವಂಥಾದ್ದು ನನ್ನ ಪ್ರಾಮಾಣಿಕವಾದಂಥ ಚಿಂತನೆ. ನಾವ್ಯಾರೂ ರಾಜಕೀಯ ಮಾಡಿಕೊಂಡು, ಇಲ್ಲಿ ಜಿಲ್ಲಾಮಂತ್ರಿಗಳು ಮಾಡಿದ್ದಾರೆ, ಎಂದು ಹೇಳುವುದಕ್ಕೆ ನಾನಂತು ತಯಾರಾಗಿಲ್ಲ. ಜಿಲ್ಲಾಮಂತ್ರಿಗಳಿಗೆ ನಾನೇನು ಸರ್ಟಿಫಿಕೇಟ್ ಕೊಡುತ್ತೇನೆ ಎನ್ನುವ ಪ್ರಶ್ನೆಯೂ ಅಲ್ಲ.

1.30 ಪಿ.ಎಂ.

ಬಹುಶಃ ಅವರಿಗೆ ಈ ವಿಚಾರ ಗೊತ್ತಿದೆಯೋ ಇಲ್ಲವೋ ? ಗೊತ್ತಿಲ್ಲ ಎಂದು ನನಗೆ ಅನಿಸುತ್ತದೆ. ಈಗ ಅಲ್ಲಿ ನಡೆದಿರತಕ್ಕಂಥಾದ್ದು, ಆದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ ಇದು ಇಷ್ಟಕ್ಕೂ ಕಾರಣ ಆ ಒಬ್ಬ ಅಧಿಕಾರಿ. ಆ ಅಧಿಕಾರಿ ಬಗ್ಗೆ ನನಗೇನೂ ವೈಯಕ್ತಿಕವಾಗಿ ದ್ವೇಷ ಇಲ್ಲ. ಆ ಅಧಿಕಾರಿಯ ಆದೇಶ ಏನು ಇದೆ ಅದನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಏಕೆಂದರೆ ನಾನು ಆ ಕ್ಷೇತ್ರದ ಒಬ್ಬ ವ್ಯಕ್ತಿ ಆಗಿ, ಆ ಅಧಿಕಾರಿ ಇಂತಹ ಪ್ರಚೋದಕಾರಿಯಾದಂತಹ ಒಂದು ಆದೇಶವನ್ನು ಹೊರಡಿಸತಕ್ಕಂಥಾದ್ದು ಸರಿಯಲ್ಲ ಎನ್ನತಕ್ಕಂಥ ಮಾತು. ನಾನು ಆ ಅಧಿಕಾರಿಯ ವೈಯಕ್ತಿಕ ವಿರುದ್ಧವಾಗಿ ಮಾಡತಕ್ಕಂಥಾದ್ದು ಅಲ್ಲ. ಮತ್ತು ನನ್ನ ಸಭಾತ್ಯಾಗ ಬಿ.ಜೆ.ಪಿ. ಗೆ ಬೆಂಬಲ ಕೊಡುವಂಥಾದ್ದು ಕೂಡ ಅಲ್ಲ.

(ಮಾನ್ಯ ಸದಸ್ಯರಾದ ಶ್ರೀವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು.)

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು : ವಾಕೌಟ್ ಮಾಡುವಾಗ ರಭಸದಲ್ಲಿ ಹೊರಟುಹೋಗಬೇಕು ನಿಧಾನವಾಗಿ ಹೋಗಬಾರದು. ಈ ರೀತಿ ಹೋದರೆ ಇದು ವಾಕಿಂಗ್ ಆಗುತ್ತದೆ. ವಾಕ್ ಔಟ್ ಮಾಡಬೇಕು.

+ ಶ್ರೀ ಸಿದ್ದರಾಮಯ್ಯ (ಹಣಕಾಸು ಹಾಗೂ ಯೋಜನಾ ಸಚಿವರು) : ಬಿ.ಜೆ.ಪಿ. ಶಾಸಕರು